ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 31st July, 1978/Shravana 9, 1900 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(to which oral answers were given)

Slum areas in Malleswaram Assembly Constituency

611 SRI P. RAMDEV (Malleswaram).—Will the Municipal Administration be pleased to state.—

(*a*) the names of slums in the Malleswaram Assembly Constituency;

(*b*) the civic amenities provided and not provided in these slum areas;

(*c*) whether among the residents of these slums, most of them belong to the harijan communities;

(*d*) the reason for not providing the basic civic amenities to these residents so far?

SRI H. C. SRIKANTAIAH (Minister for Municipal Administration).—

(*a*) The following are the 14 slums in Malleswaram Assembly Constituency.

1. Slum near Maharaja Mill, Malleswaram
2. Slum in Anjaneya Block, Seshadripur
3. Slum in Muneswara Block
4. Slum near Subedarpalya, Main Road, Yeswanthpur
5. Slum behind Primary School, near Subedarpalya
6. Slum in V Main road, Kamala Nehru Extension
7. Slum in I Block, II stage East Gokul, Pipeline, Yeswanthpur.

8. Slum in I Block, I stage East Gokul, Pipeline

9. Slum opposite to the house of H. A. Narayana Reddy, Yeswanthpur, Kamala Nehru Extension.

10. Slum in Yeswanthpur old railway line crossing area

11. Slum in the north of Yeswanthpur railway station

12. Slum in the area of Byarahanumaiah memorial development Association, Yeswanthpur.

13. Karimandi hut dwellers slum in Yeswanthpur

14. Slum area in Jabbar block, Palace Guttahalli

(b) Street lights and water taps have been provided to the 4 slum areas viz., serial number 1,8,9, and 12 of the above slums. All facilities have been provided in Jabbar block. Civic amenities have not been provided in other slums.

(c) Harijans are in large numbers in the slums mentioned at Serial Numbers 1,2,4 5,6,7 8, 11,13,14, People belonging to all communities reside in other slums.

(d) Since measures regarding acquisition of lands of this slums are under different stages of process, the civic amenities could not be provided.

ಶ್ರೀ ಪಿ. ರಾಮದೇವ್.—ಮಲ್ಲೇಶ್ವರದಲ್ಲಿರುವ ಹದಿನಾಲ್ಕು ಕೊಳಚೆ ಪ್ರದೇಶಗಳ ಪೈಕಿ ಕೇವಲ ನಾಲ್ಕು ಕೊಳಚೆ ಪ್ರದೇಶಗಳಿಗೆ ಕನಿಷ್ಠ ಸೌಕರ್ಯಗಳನ್ನು ಒದಗಿಸಲಾಗಿದೆ ಮತ್ತು ಹತ್ತು ಕೊಳಚೆ ಪ್ರದೇಶಗಳಿಗೆ ಯಾವ ರೀತಿಯ ಕನಿಷ್ಠ ಸೌಕರ್ಯಗಳನ್ನೂ ಒದಗಿಸಿಲ್ಲ. ಈ ಕೊಳಚೆ ಪ್ರದೇಶಗಳಲ್ಲಿ ಸುಮಾರು ಐವತ್ತು ಸಾವಿರ ಹರಿಜನರು ವಾಸ ಮಾಡುತ್ತಿದ್ದಾರೆ. ಮಾನವೀಯ ದೃಷ್ಟಿಯಿಂದ ಅವರಿಗೆ ಕುಡಿಯುವ ನೀರು, ದೀಪ ಮತ್ತು ಶೌಚ ಗೃಹದ ವ್ಯವಸ್ಥೆ ಮಾಡಿಕೊಡಿ ಎಂದು ನಾನು ಆರು ತಿಂಗಳಿನಿಂದಲೂ ಕೇಳುತ್ತಾ ಬಂದಿದ್ದೇನೆ ಮತ್ತು ಕಾಗದವನ್ನೂ ಬರೆದಿದ್ದೇನೆ ಆದರೂ, ಸರ್ಕಾರದವರು ಅಲ್ಲಿಗೆ ಯಾವ ಸೌಕರ್ಯವನ್ನೂ ಕಲ್ಪಿಸಿಕೊಟ್ಟಿಲ್ಲ. ಆದುದರಿಂದ, ನಾನು ಈಗ ಧರಣಿ ಕುಳಿತುಕೊಳ್ಳಬೇಕೇ ಹೇಗೆ ? ಈ ಕೊಳಚೆ ಪ್ರದೇಶಗಳ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಕಾನೂನಿಗೆ ಸಂಬಂಧಪಟ್ಟ ಕ್ರಮ ನಾನಾ ಹಂತಗಳಲ್ಲಿರುವುದರಿಂದ ಪೌರ ಸೌಲಭ್ಯಗಳನ್ನು ಒದಗಿಸಲಾಗಿಲ್ಲವೆಂದು ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಅಂದರೆ, ಕಳೆದ ಐರವತ್ತು ವರ್ಷಗಳಿಂದಲೂ ಒಂದೇ ಹಂತದಲ್ಲಿದೆಯೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಸ್ಪಷ್ಟವಾದ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಪಿ. ರಾಮದೇವ್. - ಅವರಿಗೆ ಆ ಒಂದು ಸೌಲಭ್ಯವನ್ನು ಕೊಡಬೇಕು. ಇಲ್ಲದಿದ್ದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್. - ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶದ ಜನಗಳಿಗೆ ಸೌಲಭ್ಯವನ್ನು ಒದಗಿಸುವುದು ದಿನೇ ದಿನೇ ಬಿಗಡಾಯಿಸುತ್ತಿದೆ. ಈ ಪ್ರದೇಶಗಳಿಂದ ಆರಿಸಿ ಬಂದಂತಹ ನಾವು ಆ ಕೊಳಚೆ ಪ್ರದೇಶಕ್ಕೆ ಹೋದಾಗ ಅಲ್ಲಿಯ ಜನರು ನಮಗೆ ಲೈಟ್ ಯಾವಾಗ ಬರುತ್ತದೆ, ಕಕ್ಕಸು ಯಾವಾಗ ಬರುತ್ತದೆ ಎಂದು ಕೇಳುತ್ತಾರೆ. ಆದ್ದರಿಂದ ನಾವು ಅವರಿಗೆ ಉತ್ತರವನ್ನು ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ ಆ ಕೊಳಚೆ ಪ್ರದೇಶದ ಜನಗಳಿಗೆ ಬೇಕಾದ ಸೌಲಭ್ಯಗಳನ್ನು ಯಾವಾಗ ಒದಗಿಸಿಕೊಡುತ್ತೀರಾ ? ಇದೇ ಪ್ರಶ್ನೆಯನ್ನು ಶ್ರೀಮಾನ್ ರಾಮದೇವ್ ಅವರು ಕೇಳುತ್ತಿದ್ದಾರೆ.

† ಎಚ್. ಪಿ. ಶ್ರೀಕಂಠಯ್ಯ.—ಶ್ರೀಮಾನ್ ರಾಮ್‌ದೇವ್ ಅವರು ಹೇಳಿದ ಹಾಗೆ ಅಲ್ಲಿ ಜನಗಳಿಗೆ ಕನಿಷ್ಠ ಸೌಲಭ್ಯವನ್ನು ಕೊಡುವುದಕ್ಕೆ ಆಗಿಲ್ಲ. ಅದನ್ನು ಕೊಟ್ಟಿದ್ದೇವೆ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ೪–೫ ಸ್ಲಮ್‌ಗಳಲ್ಲಿ ಮಾತ್ರ ನೀರು, ದೀಪ ಕಕ್ಕಸು ಇವುಗಳನ್ನು ಒದಗಿಸಿದ್ದೇವೆ. ಬೇರೆ ಕಡೆ ಏನಾಗಿದೆ ಎಂದರೆ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಅಫಿಷಿಯಲ್ ಆಗಿ ನೋಟಿಫಿಕೇಷನ್ ಆಗಬೇಕು. ಕೆಲವು ಕಡೆ ಜಮೀನಿನ ಮಾಲೀಕರು ಸ್ಟೇ ಆರ್ಡರ್ ತಂದಿದ್ದಾರೆ. ಅಕ್ವಿಜಿಷನ್ ನಾನಾ ಹಂತಗಳಲ್ಲಿದೆ. ಅಬ್ಜೆಕ್ಷನ್ ಕಾಲ್‌ಫಾರ್ ಮಾಡಿದ್ದಾರೆ. ಅವರು ಅದಕ್ಕೆ ಉತ್ತರ ಕೊಡಬೇಕು. ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸುವುದಕ್ಕೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಕೇಳುತ್ತೇವೆ. ಅವರು ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಆ ಜಮೀನನ್ನು ಅಕ್ವೈರ್ ಮಾಡುವುದಕ್ಕೆ, ಅಭಿವೃದ್ಧಿಕಾರ್ಯವನ್ನು ಮಾಡುವುದಕ್ಕೆ ನಾವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರ ಹೇಳುವ ಕಡೆ ಕುಡಿಯುವ ನೀರು, ದೀಪಗಳು. ಮತ್ತು ಇತರ ಮಿನಿಮಮ್ ಸೌಲಭ್ಯಗಳನ್ನು ಕೊಡಬೇಕಾದ್ದು ನಮ್ಮ ಧರ್ಮ. ಅದನ್ನು ನಾವು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ. ರಾಮದೇವ್. ನಾನು ಕೇಳತಕ್ಕ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ತೃಪ್ತಿಕರವಾಗಿದೆ. ಆದರೆ ನನ್ನ ದುಃಖವೇನೆಂದರೆ ಈ ಮಲ್ಲೇಶ್ವರ ಏರಿಯಾದಲ್ಲಿರತಕ್ಕ ಕೊಳಚೆ ಪ್ರದೇಶದ ಜನಗಳು ಕಕ್ಕಸಿಗೆ ಹೋಗಬೇಕಾದರೆ ಬಹಳ ಕಷ್ಟ ಇದೆ. ಇದು ಸ್ಟೇ ಆರ್ಡರ್ ವೆಕೇಟ್ ಆಗುವ ತನಕ, ಅಕ್ವಿಜಿಷನ್ ಆಗುವ ತನಕ ಕಾಯಬೇಕು ಎನ್ನುವ ವಿಚಾರವಲ್ಲ. ಇದನ್ನು ಮಾನವೀಯ ತೆಯ ದೃಷ್ಟಿಯಿಂದ ನೋಡಬೇಕು. ಅವರಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಕೊಳಾಯಿಗಳನ್ನು ಹಾಕಿಸುವುದಕ್ಕೆ ನೇಚರ್ ಕಾಲಿಗೆ ನಾಲ್ಕು ಕಕ್ಕಸುಗಳನ್ನು ಕಟ್ಟಿಸುವುದಕ್ಕೆ ಗುಡಿಸಲುಗಳು ಇರುವ ಜಾಗದಲ್ಲಿ ದೀಪದ ಲೈನ್ ಎಳೆದು ದೀಪಗಳನ್ನು ಹಾಕಿಸುವುದಕ್ಕೆ ಆಕ್ವಿಜಿಷನ್ ಅಡ್ಡ ಬರುವುದಿಲ್ಲ. ಆಕ್ವಿಜಿಷನ್ ಬೇಕಾದರೆ ನಿಧಾನವಾಗಿ ಆಗಲಿ. ಸೈಟು ಮನೆಗಳನ್ನು ಕಟ್ಟಿಸಿಕೊಡುವುದನ್ನು ನಿಧಾನವಾಗಿಯೇ ಕೊಡಿ. ಆದರೆ ಮನುಷ್ಯನಿಗೆ ಬೇಕಾದ ಬೇಸಿಕ್ ಅಮಿನಿಟೀಸ್‌ಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಆ ಪ್ರದೇಶದಲ್ಲಿ ಹರಿಜನರೇ ಜಾಸ್ತಿ ಇದ್ದಾರೆ. ಅವರಿಗೆ ಅಲ್ಲಿ ಸರಿಯಾದ ಸೌಲಭ್ಯಗಳು ಇಲ್ಲದೆ ಅವರು ರೋಗರುಜಿನಗಳಿಗೆ ತುತ್ತಾಗಿ ತೊಂದರೆ ಪಡುತ್ತಿದ್ದಾರೆ. ನಾವು ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ. ಚುನಾವಣೆ ಬಂದಾಗ ಇಲ್ಲಿಗೆ ಬರುತ್ತೀರಾ ಆಮೇಲೆ ನಮಗೆ ನೀವು ನಮಗೆ ಯಾವ ಅನುಕೂಲತೆಗಳನ್ನೂ ಮಾಡಿಕೊಡುವುದಿಲ್ಲ ಎಂದು ಹೇಳುತ್ತಾರೆ. ಸ್ಟೇ ವೆಕೇಷನ್ ಅಕ್ವಿಜಿಷನ್ ಇತ್ಯಾದಿಗಳು ನಿಧಾನವಾಗಿ ಆಗಲಿ ಆದರೆ ಅವರಿಗೆ ಮಿನಿಮಮ್ ಅಮಿನಿಟೀಸ್‌ಗಳನ್ನು ನೆಸೆಸಿಟೀಸ್‌ಗಳನ್ನು ಇನ್ನು ೧೫–೨೦ ದಿವಸಗಳಲ್ಲಿ ಅವರಿಗೆ ಒದಗಿಸಿಕೊಡುವ ಭರವಸೆಯನ್ನು ಕೊಡುತ್ತೀರಾ ? ಅವರಿಗೆ ಕಕ್ಕಸುಗಳನ್ನು ಕಟ್ಟಿಸಿಕೊಡತಕ್ಕದ್ದು ಟ್ಯಾಪ್ ಹಾಕತಕ್ಕನ್ನು ದೀಪಗಳನ್ನು ಹಾಕಿಸತಕ್ಕದ್ದು ಇವುಗಳನ್ನು ಮಾಡಿಕೊಡುತ್ತೀರಾ ? ಅಲ್ಲಿ ಹೆಂಗಸರು ಬಯಲಿನಲ್ಲಿ ಕಕ್ಕಸಿಗೆ ಕುಳಿತುಕೊಳ್ಳುತ್ತಾರೆ ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡಿ ದೀಪ; ಟ್ಯಾಪು ರಸ್ತೆ ಮಾಡಿಸುವುದು, ಕಕ್ಕಸುಗಳನ್ನು ಮಾಡಿಸಿಕೊಡುವ ಬಗ್ಗೆ ನನಗೆ ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಪಿ. ಶ್ರೀಕಂಠಯ್ಯ.—ಅಧ್ಯಕ್ಷರೆ ಶ್ರೀಮಾನ್ ರಾಮದೇವ್ ಅವರು ಹೇಳಿದ ಹಾಗೆ ಅಲ್ಲಿ ಮೆಜಾರಿಟಿ ಹರಿಜನರೇ ವಾಸಮಾಡತಕ್ಕದ್ದು. ಈಗ ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಎಷ್ಟು ಕಾತುರತೆ ಇದೆಯೋ ಅಷ್ಟೇ ಕಾತುರತೆ ಸರ್ಕಾರದವರಿಗೂ ಇದೆ. ಬೇಸಿಕ್ ಅಮಿನಿಟೀಸ್ ನೀರು ದೀಪ, ಕುಡಿಯುವ ನೀರು ಕಕ್ಕಸು ಇತ್ಯಾದಿಗಳನ್ನು ಆದಷ್ಟು ಜಾಗ್ರತೆ ಖಂಡಿತವಾಗಿಯೂ ಮಾಡಿಸಿಕೊಡುತ್ತೇವೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಈಗ ಮಾನ್ಯ ಮಂತ್ರಿಗಳು ಕೆಲವು ಕಡೆ ರಸ್ತೆ ದೀಪ ಕೊಟ್ಟಿದ್ದೇವೆ ಎಂದು ಹೇಳಿದರು. ಈಗ ಅವರು ಕೊಳಚೆ ಪ್ರದೇಶದಲ್ಲಿ ದೀಪಗಳನ್ನೇನು ಹಾಕಿಸಿಕೊಟ್ಟಿದ್ದಾರೆ ಅದರಲ್ಲಿ ಶೇಕಡಾ ೫೦ ಭಾಗಕ್ಕಿಂತ ಹೆಚ್ಚು ದೀಪಗಳು ಉರಿಯುವುದಿಲ್ಲ. ಕೊಳಾಯಿಗಳಿಲ್ಲವೂ ಕಿತ್ತು ಹೋಗಿವೆ, ಈಗ ಬೆಂಗಳೂರು ಕಾರ್ಪೋರೇಷನ್ ಬಜೆಟ್ಟಿನಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನರಿಗೆ ಏರ್ಪಾ

Asterisks indicate that remarks or Speeches have not been revised by the member concerned.

ಮಾಡಬೇಕು ಎಂದು ಇದೆ. ಆದರೆ ಅದರಂತೆ ಖರ್ಚು ಮಾಡುತ್ತಾ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಕಾರ್ಪೊರೇಷನ್ನಿಗೆ ಸೂಚನೆ ಕೊಟ್ಟು ಕಾರ್ಪೊರೇಷನ್ ಬಡ್ಜೆಟ್ಟಿನಲ್ಲಿ ೧೮ ಪರ್ಸೆಂಟ್ ಹಣವನ್ನು ಈ ಕೊಳಚೆ ಪ್ರದೇಶದಲ್ಲಿ ಈ ಕೆಲಸಗಳನ್ನು ಮಾಡುವುದಕ್ಕೆ ಉಪಯೋಗಿಸಿದರೆ ಈ ಪ್ರಾಬ್ಲಮ್ ಸಾಲ್ವ್ ಆಗುತ್ತದೆಯಲ್ಲವೇ ?

ಶ್ರೀ ಎಚ್. ಪಿ. ಶ್ರೀಕಂಠಯ್ಯ.— ನಿರ್ದಿಷ್ಟವಾಗಿ ಎಲ್ಲಿ ದೀಪ ನಲ್ಲಿ ಕೆಟ್ಟು ಹೋಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದರೆ ಕಾರ್ಪೊರೇಷನ್ನಿಗೆ ತಿಳುವಳಿಕೆ ಕೊಟ್ಟು ಮಾಡಿಸುತ್ತೇವೆ.

Relief to Tobacco Growers

616 SRI A. B. BEDAGE (Sadalga).—Will the Minister for Agriculture and Parliamentary Affairs be pleased to state.—

(*a*) whether it has come to the notice of the Government that the financial position of tobacco growers has worsened and causing anxiety due to the decline in tobacco prices severly and that the Central Government is finding out relief measures in this regard ;

(*b*) whether the Government intend to provide immediat relief to the ryots (tobacco growers) in consultation with the Central Government in this regard ?

SRI K. H. RANGANATH (Minister for Agriculture and Parliamentary Affairs).—

(*a*) Yes.

(*b*) The Secretary to the Government, Agricultural Department and the Director of Agriculture have brought this matter to the notice of the Tobacco Board. As a result of this, the Government of India have decided to buy 25,000 metric tons of Bidi tobacco through NAFED.

ಶ್ರೀ ಎ.ಬಿ. ಬೇಡಗೆ—ಸ್ವಾಮಿ ನನ್ನ ಪ್ರಶ್ನೆಯಲ್ಲಿ ತಂಬಾಕು ದರವು (ಬೀಡಿ ತಂಬಾಕು) ತೀರ ಇಳಿದಿರುವುದರಿಂದ ತಂಬಾಕು ಬೆಳೆಗಾರರ ಆರ್ಥಿಕ ಸ್ಥಿತಿ ಬುಡಮೇಲಾಗಿ ಕಳವಳಕಾರಕವಾಗಿರುವುದರಿಂದ ಕೇಂದ್ರ ಸರ್ಕಾರವು ಪರಿಹಾರ ಶೋಧಿಸುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ, ಆದರೆ ಕೇಂದ್ರ ಸರ್ಕಾರದವರು ಬೀಡಿ ತಂಬಾಕನ್ನು ನಾಫೆಡ್ ಸಂಸ್ಥೆಯ ಮುಂಖಾತರ ಕೊಳ್ಳಲು ನಿರ್ಧರಿಸಿರುವುದರಿಂದ ತಂಬಾಕು ಬೆಳೆಗಾರರಿಗೆ ನೀರಿಕ್ಷಿಸಿದಷ್ಟು ದರ ಸಿಕ್ಕಿಲ್ಲ ತಂಬಾ ತೊಂದರೆಯಾಗಿದೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

† ಶ್ರೀ ಕೆ.ಎಚ್. ರಂಗನಾಥ್—ನಾಫೆಡ್ ಸಂಸ್ಥೆಯವರು ಕೇಂದ್ರ ಸರ್ಕಾರದ ಆದೇಶದಂತೆ ತಂಬಾಕನ್ನು ಫೆಡರೇಷನ್ ಮುಖಾಂತರ ಒಂದು ಕೆ.ಜಿ.ಗೆ ಒಂದು ರೂಪಾಯಿಯಂತೆ ಕೊಡುಕೊಳ್ಳಬೇಕು ಎಂದು ಆಗಿದೆ.

ಶ್ರೀ ಎ.ಬಿ. ಬೇಡಗೆ—ಅವರು ಕೊಡುತ್ತಿರುವ ದರ ಬಹಳ ಕಡಿಮೆ ಅಲ್ಲವೇ ?

ಶ್ರೀ ಕೆ.ಎಚ್. ರಂಗನಾಥ್—ಅದಕ್ಕೆ ಕಾರಣ ಇಷ್ಟೆ ನಮ್ಮ ರಾಜ್ಯದಲ್ಲಿ ಮತ್ತು ಗುಜರಾತ್‌ನಲ್ಲಿ ತಂಬಾಕು ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಆದ್ದರಿಂದ ಈ ಒಂದು ಪರಿಸ್ಥಿತಿ ಬಂದಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಮೋಹನ್‌ಧಾರಿಯಾ ಅವರು ಒಂದು ಸಭೆಯನ್ನು ಕರೆದಿದ್ದರು. ಅದಕ್ಕೆ ನಮ್ಮ ಇಲಾಖೆಯ ಕಮಿಷನರ್ ಸೆಕ್ರೆಟರಿಯವರು, ತಂಬಾಕುಬೋರ್ಡ್